ಅದರ ಮೇಲೆ ಮಧ್ಯಾಹ್ನ ಅವಳಿಗೆ ಮುಂದಿನ ರಸ್ತೆಯಲ್ಲಿದ್ದ ರಿಸರ್ವ್ ಬ್ಯಾಂಕಿನ ಮುಖ್ಯ ಆಫೀಸಿಗೆ ಹೋಗುವ ಕೆಲಸವಿತ್ತು.

ಅವಳು ಕೆಲಸ ಮಾಡುವ ಖಾಸಗಿ ಕಂಪನಿಯ ಆಫೀಸು ದಕ್ಷಿಣ ಮುಂಬಯಿಯ ಜನನಿಬಿಡ ಸ್ಟಾಕ್ ಎಕ್ಸ್‌ಚೇಂಜಿನ ರಸ್ತೆಯಲ್ಲೇ ಇತ್ತು. ಏಳನೇ ಮಹಡಿಯ ಕೊನೆಯ ಆಫೀಸಿನಲ್ಲಿ ಅವಳ ಕ್ಯಾಬಿನ್ನಿನ ಕಿಟಿಕಿಯಿಂದ ಗೇಟ್ ವೇ ಆಫ್ ಇಂಡಿಯಾದ ಭವ್ಯ ದ್ವಾರ ಹಾಗೂ ತಾಜ್ ಹೋಟೆಲಿನ ಒಂದು ಭಾಗ ಕಾಣುತ್ತಿತ್ತು. ಕ್ಯಾಬಿನ್ನಿಗೆ ಬಂದ ಮೇಲೆಯೂ ವಾರದ ಮೊದಲ ದಿನದ ಎಡೆಬಿಡದ ಕೆಲಸಗಳ ಮಧ್ಯವೂ, ಶಮಾಳ ಏರುದನಿಯ, 'ಐ ಆಮ್ ಎಂಗೇಜ್ಡ್' ಎಂಬ ಶಬ್ದಗಳು ಫಕ್ಕನೆ ಕಿವಿಯಲ್ಲಿ ಮೊರೆದಂತಾಗುತ್ತಿದ್ದುವು. ಕೀಬೋರ್ಡಿನ ಮೇಲೆ ಬೆರಳಾಡಿಸುವಾಗ ಮುಖದ ಮೇಲೆ ಬರುತ್ತಿದ್ದ ಕೂದಲನ್ನು ಹಿಂದಕ್ಕೂ ಮೇಲಕ್ಕೂ ಮಾಡಿ ಡ್ರಾವರ್‌ನಲ್ಲಿದ್ದ ಕ್ಲಿಪ್ಪನ್ನು ತೆಗೆದು ಸಿಕ್ಕಿಸಿಕೊಂಡು ಕೆಲಸ ಮುಂದುವರಿಸಿದಳು. ಆಫೀಸು ಮುಗಿಸಿ ಸಂಜೆ ಮನೆಗೆ ಹೋಗುವಾಗಲೇ ಅವಳಿಗೆ ಆ ಬಗ್ಗೆ ಸರಿಯಾಗಿ ಯೋಚಿಸಲು ಸಮಯ ಸಿಕ್ಕಿದ್ದು.

ಚರ್ಚ್‌ಗೇಟಿನಿಂದ ಹೊರಡುವ ಬಾಂದ್ರಾ ಲೋಕಲ್‌ನ ಮೊದಲ ದರ್ಜೆಯ ಡಬ್ಬಿಯೊಳಗೆ ಹತ್ತಿ ನಿಂತ ಮರುಗಳಿಗೆಯಲ್ಲಿ ಅವಳು ಆ ಬಗ್ಗೆ ಯೋಚಿಸಲು ಸುರುಮಾಡಿಯಾಗಿತ್ತು. ಮನೆಯವರು ನೋಡಿ ಮಾಡಿದ್ದಿರಲಿಕ್ಕಿಲ್ಲ. ಖಂಡಿತ ಅವಳೇ ಮಾಡಿಕೊಂಡಿರಬೇಕು. ಕಳೆದ ಸಲ ಹೋದಾಗ ಅವಳ ಆಫೀಸಿಗೆ ಬರುತ್ತಿದ್ದ ಮಾರಾಟ ಪ್ರತಿನಿಧಿಯೊಬ್ಬನ ಬಗ್ಗೆ ಹೇಳುತ್ತಿದ್ದಳು. ಅವನೇ ಇರಬಹುದೇ? ಆದರೆ, ಅವನಿಗೆ ಮದುವೆಯಾಗಿದೆಯೆಂದು ಹೇಳಿದ ನೆನಪು.

ಶಮಾಳಿಗೂ ತನ್ನದೇ ಪ್ರಾಯ. ಈ ವರ್ಷ ತಮಗಿಬ್ಬರಿಗೂ ಮೂವತ್ತಮೂರಲ್ಲವೇ? ಎಂದು ನೆನಪುಮಾಡಿಕೊಂಡಳು. ಸರಿಯಾದ ಹುಡುಗ ಅಂತ ಜೀವನ ಪೂರ್ತಿ ಕಾಯುತ್ತೀರಾ ಹೇಗೆ ಎಂದು ಅವಳ ಅಮ್ಮ ಸಿಡುಕುವುದಿತ್ತು. 'ಅಮ್ಮ, ನಿಂಗೆ ಅರ್ಥ ಆಗುವುದಿಲ್ಲ,' ಎಂದಷ್ಟೇ ಹೇಳಿ ಮುಗಿಸಿಬಿಡುತ್ತಿದ್ದಳು. ಈಗೀಗ ಅದೂ ಇಲ್ಲ. ಅಮ್ಮ ಅವಳಷ್ಟಕ್ಕೆ ಹೇಳಿಕೊಂಡಿದ್ದರೆ, ತಾನು ಕೇಳಿಯೂ ಕೇಳದಂತೆ ಸುಮ್ಮನಿದ್ದು ಬಿಡುತ್ತಿದ್ದಳು. ಕಳೆದ ಸಲ ಹೋದಾಗ ಅಮ್ಮನಿಗೆ ಸಿಟ್ಟು ಬಂದಿತ್ತು. 'ಸೀತ ಚಿಕ್ಕಿ ಹತ್ತಿರ ನೀನು ಎಂಥ ಹೇಳಿದ್ದು?' ಎಂದು ದಬಾಯಿಸಿದ್ದಳು, 'ನನಗೆ ಮದುವೆಯಲ್ಲಿ ಆಸಕ್ತಿಯೇ ಇಲ್ಲ. ಕೆರಿಯರ್‌ನಲ್ಲೇ ಮೇಲೆ ಮೇಲೆ ಹೋಗುವ ಎಂಬಿಷನ್ ಅಂದಿಯಂತೆ?'

ಅಮ್ಮ ಅದನ್ನು ಕೇಳುವ ರೀತಿ, ದುರುದುರು ತನ್ನನ್ನೇ ನೋಡುವ ಕ್ರಮ, ಕಣ್ಣಲ್ಲಿ ತುಳುಕಲಿದ್ದಂತಿದ್ದ ನೀರಿನ ಬುಗ್ಗೆ – ಇವನ್ನೆಲ್ಲ ನೋಡಿ ಪವನಳಿಗೆ ನಗೆ ಉಕ್ಕಿ ಬಂದಿತ್ತು.

'ಮತ್ತೆ ನಾನು ಏನು ಹೇಳಬೇಕಿತ್ತು?'

'ಅಲ್ಲ, ಮದುವೆ ಅಷ್ಟು ಇಂಪಾರ್ಟೆಂಟಾ ಅಂತ ಕೇಳಿದಿಯಂತೆ?'

ಈ ಸೀತ ಚಿಕ್ಕಿಗೆ ಬೇರೆ ಕೆಲಸವಿಲ್ಲ. ಹೌದನ ನಿಂಗೆ ಮದುವೆ ಆಲೋಚನೆ ಇಲ್ವನ ಅಂತ ತನ್ನ ಹತ್ತಿರ ಕೇಳಿದರೆ ತಾನಾದರೂ ಏನು ಉತ್ತರ ಕೊಡಬೇಕು? ಹೌದು ಚಿಕ್ಕಿ, ನನಗೆ ಮದುವೆಯ ಆಸೆ ತುಂಬ ಉಂಟು. ಏನು ಮಾಡುವುದು... ಎಂದು ಗೋಳು ಹೊಯ್ಕೊಳ್ಳಬೇಕಿತ್ತೇ. ಅಥವಾ ಸರಿಯಾದ ಹುಡುಗ ಸಿಕ್ಕಿದ್ದರೆ ಇಪ್ಪತ್ತೆರಡು ವರ್ಷಕ್ಕೇ ಮದುವೆಯಾಗಿ ಬಿಡುತ್ತಿದ್ದೆ, ಎನ್ನಬೇಕಿತ್ತೇ?

ರೈಲಿನಿಂದ ಇಳಿದು, ನಿಲ್ದಾಣದ ಹೊರಗಿನ ಅಂಗಡಿಯೊಂದರಲ್ಲಿ ನೂಡಲ್ಸ್‌ನ ಎರಡು ಕಟ್ಟುಗಳನ್ನು ಕೊಂಡುಕೊಂಡ ಅವಳು ಅವಸರದಲ್ಲಿ ರಿಕ್ಷಾ ಹತ್ತಿದಳು.

ಮನೆಗೆ ಬಂದು ವಿರಾಮದಲ್ಲಿ ಕುಳಿತು ಶಮಾಳಿಗೆ ಫೋನು ಮಾಡಿದಳು. ಗಂಟೆ ಕಾಲ ಮುಂದುವರಿದ ಮಾತು ಕಡಿಯುತ್ತಲೇ ಇರಲಿಲ್ಲ. ಅವಳ ತಂದೆ ತಾಯಿ ಬೆಂಗಳೂರಿಗೆ ಬಂದಿದ್ದರೆಂದೂ ನಿನ್ನೆಯಷ್ಟೇ ಹುಡುಗನನ್ನೂ, ಅವನ ಮನೆಯವರನ್ನೂ ಭೇಟಿಯಾಗಿ ದಿನ ನಿಶ್ಚಯ